ಪಾರ್ಲಿಮೆಂಟ್



# ಬೂಡಪೆಸ್ಟ್

## ಬಿಡುವೆನೆಂದರೂ ಬಿಡದೀ ಮಾಯೆ!



ಯೂರೋಪಿನ ಹಾಲಿವುಡ್ ಎಂದೇ ಹೆಸರುವಾಸಿಯಾಗಿರುವ ಬೂಡಪೆಸ್ಟ್, ಸಿನಿಮಾ ನಿರ್ಮಾಪಕರ ನೆಚ್ಚಿನ ತಾಣ.

■ ಚಿತ್ರ-ಲೇಖನ: **ಪ್ರದೀಪ್ ವೆಂಕಟರಾಮ್**





ಚೈನ್ ಬ್ರಿಡ್ಜ್



ರೂಯಿನ್ಡ್ ಪಬ್

ಹಂಗೆರಿ ದೇಶದ ರಾಜಧಾನಿ ಬೂಡಪೆಸ್ಟ್ 'ಪೂರ್ವ ಯೂರೋಪಿನ ಪ್ಯಾರಿಸ್' ಎಂದೇ ಪ್ರಸಿದ್ಧ. ಇಲ್ಲಿ ಯುನೆಸ್ಕೊ ಮಾನ್ಯತೆ ಪಡೆದ ವಿಶ್ವ ಪರಂಪರೆಯನ್ನು ಪ್ರತಿಬಿಂಬಿಸುವ  ಸ್ಮಾರಕಗಳು, ಅರಮನೆಗಳು, ಪ್ರಾಚೀನ ಕಟ್ಟಡಗಳು ಸೇರಿದಂತೆ ಅನೇಕ ಕುತೂಹಲಕಾರಿ ಪ್ರವಾಸೀ ತಾಣಗಳಿವೆ.

ಯೂರೋಪಿನುದ್ದಕ್ಕೂ ಹರಿಯುವ ಡಾನ್ಯೂಬ್ ನದಿ ಸಹಜವಾಗಿ ಉತ್ತರ–ದಕ್ಷಿಣಕ್ಕೆ ವಿಭಜಿಸಿರುವ ನಗರಗಳೇ ಬೂಡ ಮತ್ತು ಪೆಸ್ಟ್. ನದಿಯ ಪಶ್ಚಿಮ ದಡದಲ್ಲಿ, ಬೆಟ್ಟಗುಡ್ಡಗಳ ನಡುವೆ ಬೂಡ ಪ್ರದೇಶವಾದರೆ, ಪೂರ್ವ ದಿಕ್ಕಿನಲ್ಲಿ ಬೆಳೆದಿರುವ ನಗರ ಪೆಸ್ಟ್. ಈ ಪ್ರದೇಶದ ಇತಿಹಾಸ ಸುಮಾರು 3000 ವರ್ಷಗಳಷ್ಟು ಪುರಾತನವಾದರೂ, ಇವೆರಡೂ ನಗರಗಳ ಒಂದುಗೂಡುವಿಕೆಯಾದದ್ದು 1873ರಲ್ಲಿ.

## ಹೀರೋಸ್ ಸ್ಕ್ವೇರ್

ಬೂಡಪೆಸ್ಟ್‌ನಲ್ಲಿ ಚಿತ್ರಿಸಿದ ಅನೇಕ ಬಾಲಿವುಡ್ ಚಿತ್ರಗಳ ಕುರಿತು ಬಸ್ಸಿನಲ್ಲಿನ ನಮ್ಮ ಹರಟೆಯ ಸುಳಿವು ಗೈಡ್‌ಗೆ ತಿಳಿಯಿತು. ಹಾಗಾಗಿ, ಇಲ್ಲಿನ ಪ್ರೇಕ್ಷಣೀಯ ಸ್ಥಳಗಳ ಸಂದರ್ಶನ ಶುರುವಾದದ್ದು ಹೀರೋಸ್ ಸ್ಕ್ವೇರ್‌ನಿಂದ! 1900ರಲ್ಲಿ ನಿರ್ಮಿಸಲಾದ ಈ ರಾಷ್ಟ್ರೀಯ ಸ್ಮಾರಕ ವಿಶಾಲವಾಗಿಯೂ, ಆಕರ್ಷಣೀಯವಾಗಿಯೂ ಇದೆ. ನಗರದ ಅನೇಕ ಮುಖ್ಯ ಉತ್ಸವಗಳ ವೇದಿಕೆ ಸಜ್ಜಾಗುವುದು ಇಲ್ಲೇ. ಇದರ ಎಡ ಭಾಗಕ್ಕೆ ಕಲಾವಸ್ತು ಸಂಗ್ರಹಾಲಯವೂ (ಮ್ಯೂಸಿಯಂ ಆಫ್ ಫೈನ್ ಆರ್ಟ್ಸ್) ಬಲ ಭಾಗಕ್ಕೆ ಕಲಾ ಅರಮನೆಯೂ (ಆರ್ಟ್ ಪ್ಯಾಲೇಸ್) ಇದೆ.

ಥರ್ಮಲ್ ಬಾತ್: ಹೀರೋಸ್ ಸ್ಕ್ವೇರ್ ಪಕ್ಕದಲ್ಲೇ ಇರುವ ವಿಶೇಷವಾದ ಆಕರ್ಷಣೆ ಬಿಸಿನೀರಿನ ಸ್ನಾನದ ಕೊಳಗಳು. ಇವುಗಳಲ್ಲಿ ಅತ್ಯಂತ ಹೆಸರುವಾಸಿಯಾಗಿರುವ ಶೆಚೆನ್ಯಿ ಕೊಳಗಳಿಗೆ ನೂರು ವರ್ಷಗಳ ಇತಿಹಾಸವಿದೆ. ಇದು ಸಾಮಾನ್ಯವಾದ ಬಿಸಿನೀರಿನ ಕೊಳಗಳಷ್ಟೇ ಅಲ್ಲ! ಇಲ್ಲಿನ ನೀರಿನಲ್ಲಿ ನೈಸರ್ಗಿಕವಾದ ರೋಗಗಳನ್ನು ಗುಣಪಡಿಸುವ ಶಕ್ತಿಯಿದೆ ಎನ್ನುತ್ತಾರೆ. ಈ ಆವರಣದಲ್ಲಿ ಮಸಾಜ್, ಸೌನ, ಜಾಕುಜಿ, ವರ್ಲ್‌ಪೂಲ್, ಜಿಮ್‌ಗಳಂತಹ ಆಧುನಿಕ ವ್ಯವಸ್ಥೆಗಳಿದ್ದು, ಸ್ಥಳೀಯರಿಗೆ ಇದೊಂದು ಸೌಂದರ್ಯವರ್ಧಕ ಮತ್ತು ಆರಾಮದಾಯಕ ಆರೋಗ್ಯಧಾಮವೂ ಹೌದು. ನೈಸರ್ಗಿಕ ಬಿಸಿನೀರಿನ ಸ್ನಾನದ ಆನಂದವನ್ನು ಪ್ರವಾಸಿಗರೂ ಅನುಭವಿಸಬಹುದು.



ಮಥಿಯಸ್ ಚರ್ಚ್

ರಾಯಲ್ ಕ್ಯಾಸೆಲ್: ಡಾನ್ಯೂಬ್ ನದಿಯ ದಡದಲ್ಲಿ, ತನ್ನ ಅಗಾಧವಾದ ಪ್ರಭಾವವನ್ನು ಬೀರುತ್ತಿರುವ ಯುನೆಸ್ಕೊ ಮಾನ್ಯತೆ ಪಡೆದಿರುವ ರಾಯಲ್ ಕ್ಯಾಸೆಲ್ ಸಂಕೀರ್ಣ, ಬೂಡಪೆಸ್ಟ್‌ನ ಪ್ರಮುಖ ಆಕರ್ಷಣೆ.

ಯೂರೋಪಿನ ಸಾಂಸ್ಕೃತಿಕ ಮತ್ತು ಐತಿಹಾಸಿಕ ನಗರವೆಂದೂ ಹೆಸರುವಾಸಿಯಾಗಿರುವ ಬೂಡಪೆಸ್ಟ್‌ನ ಖ್ಯಾತಿಗೆ ಮೆರುಗು ಕೊಡುವಂತಿರುವ ರಾಯಲ್ ಪ್ಯಾಲೇಸಿನ ವಾಸ್ತುಶಿಲ್ಪವನ್ನೂ, ಅದರ ಭವ್ಯತೆಯನ್ನೂ, ಅಚ್ಚುಕಟ್ಟಾಗಿರುವ ಸಂಕೀರ್ಣದ ನಿರ್ವಹಣೆಯನ್ನೂ, ಅದೆಷ್ಟು ಬಣ್ಣಿಸಿದರೂ ಸಾಲದು. 13ನೇ ಶತಮಾನದಲ್ಲಿ ಮೂಲ ಪ್ಯಾಲೇಸ್ ನಿರ್ಮಿತವಾದರೂ, ನಿರಂತರವಾಗಿ ನಡೆಯುತ್ತಿದ್ದ ದಾಳಿಗಳಿಂದಲೂ, ಯುದ್ಧಗಳಿಂದಲೂ ನಾಶವಾಗುತ್ತಿತ್ತು. ಈಗಿರುವ ಪ್ಯಾಲೇಸ್ ಎರಡನೇ ಮಹಾಯುದ್ಧದ ನಂತರ ಮರುನಿರ್ಮಾಣವಾದದ್ದು. ಪಕ್ಕದಲ್ಲಿರುವ ಮಥಿಯಾಸ್ ಚರ್ಚ್ ಇನ್ನೊಂದು ಆಕರ್ಷಣೆ. ಚೈನ್ ಬ್ರಿಡ್ಜಿನಿಂದ ಪ್ಯಾಲೇಸಿಗೆ ಹೋಗಲು ಕೇಬಲ್ ರೈಲ್ (funicular railway) ವ್ಯವಸ್ಥೆಯಿದೆ.

## ಡಾನ್ಯೂಬ್ ಕ್ರೂಸ್

ಒಂದು ಗಂಟೆಯ ಧ್ವನಿ ಮತ್ತು ದೃಷ್ಟಿ (Sound and light) ಪ್ರದರ್ಶನದೊಂದಿಗೆ ಶುರುವಾಗುವ ಈ ಕ್ರೂಸ್, ಪ್ರವಾಸಿಗರಿಗೆ ರಾಜ ಮಹಾರಾಜರ, ಕವಿಗಳ, ಸಂಶೋಧಕರ ಸ್ವಾರಸ್ಯಕರ ಕಥೆಗಳನ್ನು ವಿವರಿಸುತ್ತಾ ಇಲ್ಲಿನ ಭವ್ಯ ಇತಿಹಾಸದ ಪರಿಚಯ ಮಾಡಿಸುತ್ತದೆ. ಎರಡೂ ಕಡೆಯ ಪ್ರಾಚೀನ ಕಟ್ಟಡಗಳ ವಿದ್ಯುತ್ ದೀಪಾಲಂಕಾರ, ನದಿಯ ನೀರಿನಲ್ಲಿ ಪ್ರತಿಬಿಂಬದ ದೃಶ್ಯ, ಬೂಡಪೆಸ್ಟ್‌ನ ಪ್ರಾಕೃತಿಕ ಸೌಂದರ್ಯವನ್ನು ಎತ್ತಿಹಿಡಿಯುತ್ತದೆ.

ರೂಯಿನ್ಡ್ ಪಬ್ಸ್: ಇನ್ನಿತರ ಯೂರೋಪ್ ರಾಷ್ಟ್ರಗಳಂತೆ ಇಲ್ಲಿನ ಬೆಲೆಗಳು ಅಷ್ಟೊಂದು ದಂಗುಬಡಿಸುವುದಿಲ್ಲ. ನಮ್ಮ ರೂಪಾಯಿಗೆ ಮರ್ಯಾದೆ ಕೊಡುವ ಕೆಲವೇ ದೇಶಗಳಲ್ಲಿ ಇದೂ ಒಂದು. ಈ ದೇಶದ ಕರೆನ್ಸಿಯನ್ನು ಫೋರಿಂಟ್ (Forint: HUF) ಎನ್ನುತ್ತಾರೆ. ಒಂದು ಫೋರಿಂಟಿಗೆ ಕೇವಲ ನಾಲ್ಕು ರೂಪಾಯಿ. ಈ ನಗರದಲ್ಲಿ ಬೀರ್ ಅತಿ ಅಗ್ಗ. ನಮ್ಮ ಐವತ್ತು ರೂಪಾಯಿಗೆ ಇಲ್ಲಿ ಬೀರ್ ಸೇವಿಸಬಹುದು. ಆದರೆ ಕಾಫಿ/ ಟೀ ಮಾತ್ರ ಬೀರ್‌ಗಿಂತ ದುಬಾರಿ!

ಬೆಂಗಳೂರು ಪಬ್ ಸಿಟಿಯೆಂದು ಹೆಸರುವಾಸಿ. ಆದರೆ, ಬೂಡಪೆಸ್ಟ್‌ನಲ್ಲಿರುವ ರೂಯಿನ್ಡ್ ಪಬ್‌ಗಳ (ruined pubs) ಪರಿಕಲ್ಪನೆಯೇ ಬೇರೆ. ಕುತೂಹಲದಿಂದ ಕೆಲವು ಪಬ್‌ಗಳನ್ನು ವೀಕ್ಷಿಸಲು ತೀರ್ಮಾನಿಸಿದೆವು.

ಇಲ್ಲಿನ ಪಬ್‌ಗಳಿಗೂ ಮತ್ತು ಜಗತ್ತಿನ ಎರಡನೇ ಮಹಾಯುದ್ಧಕ್ಕೂ ನೇರ ಸಂಬಂಧವಿದೆ. ಆ ಸಮಯದಲ್ಲಿ ಯಹೂದಿಗಳ ಮೇಲೆ ನಡೆದ ಕ್ರೌರ್ಯ ಮತ್ತು ಸಾಮೂಹಿಕ ಹತ್ಯಾಕಾಂಡದ ಭೀಕರ ಮತ್ತು ಜೀವಂತ ಚಿತ್ರಣವಿಲ್ಲಿದೆ. ನಗರದ ಮಧ್ಯಭಾಗದಲ್ಲಿರುವ ಯಹೂದಿಗಳೇ ಹೆಚ್ಚಾಗಿ ವಾಸಿಸುತ್ತಿದ್ದ ಪ್ರದೇಶವನ್ನು ಯುದ್ಧದಲ್ಲಿ ಧ್ವಂಸ ಮಾಡಲಾಗಿತ್ತು. ಸುಮಾರು ಶೇಕಡಾ 60ರಷ್ಟು ಯಹೂದಿಗಳ ಹತ್ಯಾಕಾಂಡವಾಗಿದ್ದ ಈ ಪ್ರದೇಶದ ಬೀದಿಗಳಲ್ಲಿರುವ ಕೆಲವು ಮನೆಗಳನ್ನು ಪಬ್‌ಗಳನ್ನಾಗಿ ಪರಿವರ್ತಿಸಲಾಗಿದೆ. ಹೊರಗಿನಿಂದ ಸಾಮಾನ್ಯವಾಗಿ ಕಾಣುವ ಈ ನೆರೆಹೊರೆಯಲ್ಲಿ ಯಾವುದೇ ಚಿಹ್ನೆಗಳಿಲ್ಲ, ಗದ್ದಲವಿಲ್ಲ. 2001ರಲ್ಲಿ ಸ್ಜಿಂಪ್ಲ ಕರ್ಟ್ ಹೆಸರಿನಲ್ಲಿ ಮೊದಲ ರೂಯಿನ್ಡ್ ಪಬ್ ಶುರುವಾಗಿ, ಕಾಲಕ್ರಮೇಣ ಈ ವಿನೂತನ ಪರಿಕಲ್ಪನೆ ಜನಪ್ರಿಯವಾಯಿತು.

ಇಲ್ಲಿನ ಗಲ್ಲಿಗಳಲ್ಲಿ ಓಡಾಡುತ್ತ,ನಾವೂ ಒಂದೆರಡು ಪಬ್‌ಗೆ ಹೋದೆವು.





ಹೀರೋಸ್ ಸ್ಕ್ವೇರ್‌ನಲ್ಲಿ ಸ್ನೇಹಿತರೊಡನೆ ಲೇಖಕ (ಬಲದಿಂದ ಮೊದಲನೆಯವರು)

## ಜನಪ್ರಿಯ ಕಾಫಿಶಾಪ್

ಇಲ್ಲಿ ಅನೇಕ ಭಾರತೀಯ ರೆಸ್ಟೋರೆಂಟ್‌ಗಳಿವೆ. ಸಸ್ಯಾಹಾರಿ ಆಹಾರವೂ ಲಭ್ಯ. ಸ್ಥಳೀಯ ಅಡುಗೆಯಲ್ಲಿ ಪಶ್ಚಿಮ ಯೂರೋಪಿಗೆ ಹೋಲಿಸಿದರೆ, ಕೆಂಪು ಮೆಣಸಿನಕಾಯಿ ಹಾಗೂ ಕರಿಮೆಣಸನ್ನು ಸ್ವಲ್ಪ ಹೆಚ್ಚಾಗಿ ಉಪಯೋಗಿಸುತ್ತಿದ್ದು ಸಪ್ಪೆಯೆನಿಸುವುದಿಲ್ಲ. ನಮ್ಮಲ್ಲಿನ ಹಾಗೆ, ರಸ್ತೆಬದಿಯ ತಿಂಡಿ– ತಿನಿಸುಗಳ ಅಂಗಡಿ, ಕಾರವಾನ್‌ಗಳು ಜನಪ್ರಿಯ. ಆಯ್ಕೆಗಳೂ ವೈವಿಧ್ಯಮಯ. ಸ್ಯಾಂಡ್‌ವಿಚ್, ಬರ್ಗರ್, ಸೂಪ್, ರೋಲ್ಸ್, ಲಾಂಗೋಸ್, ಕೇಕ್, ಪೇಸ್ಟ್ರಿ, ಕಾಫಿ, ಟೀ, ಐಸ್‌ಕ್ರೀಮ್ ಇತ್ಯಾದಿ. ವಿಶೇಷವೆಂದರೆ ಇಲ್ಲಿ ಚಾಲ್ತಿಯಲ್ಲಿರುವ ಅನೇಕ ಯೂರೋಪಿಯನ್ ಭಾಷೆಗಳಲ್ಲಿ ಚಾಯ್ (chai) ಎಂದರೆ ಟೀ! ಇಲ್ಲಿನ ಕಾಫಿ ಸಂಸ್ಕೃತಿ ನಮ್ಮಂತೆಯೇ. ಏಕೆಂದರೆ, ಬೆಳಗಿನ ದಿನಚರಿಯ ಶುರು ಕಾಫಿಯಿಂದಲೇ. 16ನೇ ಶತಮಾನದಲ್ಲಿ ಶುರುವಾದ ಈ ಸಂಪ್ರದಾಯ, ೧೯ನೇ ಶತಮಾನದ ಹೊತ್ತಿಗೆ ನೂರಾರು ಕಾಫಿಶಾಪ್‌ಗಳಿಂದ ಪ್ರವರ್ಧಮಾನಕ್ಕೆ ಬಂತೆಂದು ಹೇಳಲಾಗುತ್ತದೆ. ಈಗ 600ಕ್ಕೂ ಹೆಚ್ಚು ಉತ್ತಮ ದರ್ಜೆಯ ಕಾಫಿಶಾಪ್‌ಗಳಿವೆ.

## ತಲುಪುವುದು ಹೇಗೆ?

ಡಿಸೆಂಬರ್ ಮತ್ತು ಜನವರಿಯಲ್ಲಿ ಹಿಮಪಾತದಿಂದ ರಕ್ತ ಹೆಪ್ಪುಗಟ್ಟಿಸುವ ಚಳಿ. ಪ್ರವಾಸಕ್ಕೆ ಉಳಿದ ತಿಂಗಳುಗಳು ಸೂಕ್ತ. ಬೆಂಗಳೂರಿನಿಂದ ದುಬೈ, ದೋಹ, ಪ್ಯಾರಿಸ್ ಅಥವಾ ಫ್ರಾಂಕ್‌ಫರ್ಟ್ ಮುಖಾಂತರ 12–15 ಗಂಟೆಗಳಲ್ಲಿ ತಲುಪಬಹುದು.

ಮಸಕು ಮಸಕಾಗಿದ್ದ ದೀಪಗಳ ಮಧ್ಯೆ, ಗತಕಾಲವನ್ನು ನೆನಪಿಸುವ ಪೀಠೋಪಕರಣದಲ್ಲಿ ಕುಳಿತಿದ್ದ ಎಲ್ಲ ವಯಸ್ಸಿನ ಜನರು ಬೀರ್ ಸೇವಿಸುತ್ತಾ, ಆಗಾಗ್ಗೆ ಪರಸ್ಪರ ಮುತ್ತಿಡುತ್ತಿದುದು ಕಂಡುಬಂತು. ಆದರೆ, ಇಲ್ಲಿನ ಪರಿಸರ, ವಾತಾವರಣ ನಮಗೆ ಉತ್ಸಾಹ ತರಲಿಲ್ಲ. ಹಳೆಯ ಗೋಡೆಗಳ ಗೀಚುಬರಹಗಳನ್ನು ವೀಕ್ಷಿಸುತ್ತಾ, ಆ ಮಹಾ ಯುದ್ಧದ ಘಟನೆಗಳನ್ನು ಕಲ್ಪಿಸಿಕೊಳ್ಳುತ್ತಾ, ಯಹೂದಿ ಜನಸಮೂಹದ ಮೇಲೆ ನಡೆದಿರಬಹುದಾದ ದೌರ್ಜನ್ಯಗಳು ನೆನಪಿಗೆ ಬಂತು. ಮಾನವಕುಲದ ಮೇಲೆ ನಡೆದ ಆ ಘಟನೆಗಳ ಕರಾಳ ಛಾಯೆಯಲ್ಲಿ ಸ್ಮಾರಕವಾಗಬೇಕಿದ್ದ ಸ್ಥಳಗಳು, ಇಂದು ಮೋಜಿಗೆ ವೇದಿಕೆಯಾಗಿರುವುದೊಂದು ವಿಪರ್ಯಾಸ.

### ಬೂಡಪೆಸ್ಟ್ ಮತ್ತು ಚಿತ್ರರಂಗ

ಜಗತ್ತಿನಲ್ಲಿ ಬಾಲಿವುಡ್ ಸೇರಿದಂತೆ ವರ್ಷದಲ್ಲಿ ಸುಮಾರು 5 ಸಾವಿರ ಚಲನಚಿತ್ರಗಳು ನಿರ್ಮಾಣವಾಗುತ್ತಿವೆ. ಹೊರಾಂಗಣ ಚಿತ್ರೀಕರಣಕ್ಕೆ ಅನೇಕ ಸ್ಥಳಗಳು ಜನಪ್ರಿಯವಾಗಿದ್ದು, ಕಾಲಕ್ರಮೇಣ ಅದು ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡಿದೆ. ಭಾರತೀಯರಿಗೆ ಸ್ವಿಟ್ಜರ್ಲೆಂಡ್‌ನ ಆಕರ್ಷಣೆಗೆ ಬಾಲಿವುಡ್ ಸಹಾ ಕಾರಣವೆಂದರೆ ತಪ್ಪಾಗಲಾರದು.

ಕಳೆದ ಎರಡು ದಶಕಗಳಲ್ಲಿ ಚಿತ್ರೀಕರಣಕ್ಕೆಂದೇ ಜನಪ್ರಿಯವಾದ ನಗರಗಳಲ್ಲಿ ಪ್ರಮುಖವಾದದ್ದು ಬೂಡಪೆಸ್ಟ್. ಅಂದಾಜಿನ ಪ್ರಕಾರ ನೂರು ಭಾರತೀಯ ಚಿತ್ರಗಳನ್ನು ಇಲ್ಲಿ ಚಿತ್ರೀಕರಿಸಲಾಗಿದೆ. ಇದರಲ್ಲಿ ಹಿಂದಿ ಚಿತ್ರಗಳಾದ 'ಹಮ್ ದಿಲ್ ದೆ ಚುಕೆ ಸನಮ್ '(1999), 'ಅಕ್ಸ್' (2001), ತಯಾರಿಕೆಯ ಕೊನೆಯ ಹಂತದಲ್ಲಿರುವ ಇಂಗ್ಲೀಷ್ ಚಿತ್ರಗಳಾದ Blade Runner 2049, Red Sparrow ಸೇರಿವೆ. ಜೊತೆಗೆ ಹಲವಾರು ಚಿತ್ರಗಳಲ್ಲಿ ಬೂಡಪೆಸ್ಟ್ ನಗರವನ್ನು ಬೇರೆ ನಗರಗಳಂತೆಯೂ (ಲಂಡನ್, ರೋಮ್, ವಿಯೆನ್ನ, ಮಾಸ್ಕೊ ಇತ್ಯಾದಿ) ಬಿಂಬಿಸಲಾಗಿದೆ. ಅನೇಕ ಟೆಲಿವಿಷನ್ ಸೀರಿಯಲ್‌ಗಳಿಗೂ ಬೂಡಪೆಸ್ಟ್ ಜನಪ್ರಿಯ ತಾಣ. ಅದರಲ್ಲೂ, 16ನೇ ಶತಮಾನದ ಚೈನ್ ಬ್ರಿಡ್ಜ್, ಈ ನಗರದ ಹೆಗ್ಗುರುತು ಮತ್ತು ಚಿತ್ರೀಕರಣಕ್ಕೆ ಜನಪ್ರಿಯ.

ಹಾಲಿವುಡ್‌ನ ಅನೇಕ ಚಿತ್ರಗಳ ಚಿತ್ರೀಕರಣ ನಡೆದಿದ್ದು ಬೂಡಪೆಸ್ಟ್‌ನಲ್ಲಿ. ಇದು ಚಿತ್ರರಂಗದ ಅಭಿವೃದ್ಧಿಗೆ ಪ್ರಚೋದನೆ ನೀಡಿದೆಯಷ್ಟೇ ಅಲ್ಲ, ಹಂಗೇರಿಯ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಗೂ ಸಹಾಯವಾಗಿದೆ ಎಂದು ಜನಪ್ರಿಯ ಪತ್ರಿಕೆ USA Today ವರದಿ ಮಾಡಿದೆ. ಈಗ ಬೂಡಪೆಸ್ಟ್ ಅನ್ನು 'ಯೂರೋಪಿನ ಹಾಲಿವುಡ್' ಎಂದೇ ಬಿಂಬಿಸಲಾಗುತ್ತಿದೆ.

### ವಿಶೇಷತೆಗಳ ತವರೂರು

ಈ ನಗರದ ವಿಶೇಷತೆಗಳಿಗೆ ಲೆಕ್ಕವಿಲ್ಲ. ಇಲ್ಲಿಯೇ ಯೂರೋಪ್ ಖಂಡದ ಮೊದಲ ಭೂಗರ್ಭ ವಿದ್ಯುನ್ಮಾನ ರೈಲ್ವೆ ಶುರುವಾಗಿದ್ದು! ಇಲ್ಲಿರುವ ಮೃಗಾಲಯ ಸ್ಥಾಪನೆಯಾದದ್ದು 1865ರಲ್ಲಿ. ಇದು ಜಗತ್ತಿನ ಅತ್ಯಂತ ಪುರಾತನ ಮೃಗಾಲಯಗಳಲ್ಲೊಂದು. ಡಾನ್ಯೂಬ್ ತೀರದಲ್ಲಿ ಪೆಸ್ಟ್ ಭಾಗದಲ್ಲಿರುವ ಹಂಗೇರಿ ದೇಶದ ಪಾರ್ಲಿಮೆಂಟ್ ಜಗತ್ತಿನ ಮೂರನೇ ಅತಿಹೆಚ್ಚು ವಿಸ್ತಾರವಾದ, ಸುಂದರವಾದ ಕಟ್ಟಡ.

ಬೂಡಪೆಸ್ಟ್ ಕಲೆ ಮತ್ತು ಸಂಗೀತ ಕ್ಷೇತ್ರದಲ್ಲೂ ಹೆಸರುವಾಸಿ. ಪ್ರತಿವರ್ಷದ ಆಗಸ್ಟ್‌ನಲ್ಲಿ ನಡೆಯುವ ಸಂಗೀತೋತ್ಸವದಲ್ಲಿ ಸುಮಾರು ನಾಲ್ಕು ಲಕ್ಷ ಜನರು ಭಾಗವಹಿಸುತ್ತಾರೆ. ಇತ್ತೀಚೆಗೆ ಮಧ್ಯ ಮತ್ತು ಪೂರ್ವ ಯೂರೋಪಿನ ಪ್ರಾಂತ್ಯದಲ್ಲಿ ವಾಸಿಸಲು ಅತ್ಯಂತ ಯೋಗ್ಯ ನಗರವೆಂಬ ಬಿರುದಿಗೂ ಇದು ಪಾತ್ರವಾಗಿದೆ.